ಸಂಪಾದಕೀಯ

ಗೋಡ್ಸೆ ಆರಾಧನೆ ತರವಲ್ಲ



ಗುಜರಾತ್‌ನಲ್ಲಿ ನಾಥೂರಾಂ ಗೋಡ್ಸೆ ಪ್ರತಿಮೆ ಸ್ಥಾಪನೆಗೆ ಹಿಂದೂ ಸೇನಾ ಯುವಕರು ನಿರ್ಧಾರ ಮಾಡಿರುವುದು ಬೇಸರದ ಸಂಗತಿ. ಮಹಾತ್ಮ ಗಾಂಧಿಯವರ ಹಂತಕ ಗೋಡ್ಸೆಯನ್ನು ಆರಾಧನೆ ಮಾಡುವುದೆಂದರೆ ಅದು ಪರೋಕ್ಷವಾಗಿ ದೇಶದ್ರೋಹವೇ. ಅಷ್ಟಕ್ಕೂ ಗಾಂಧೀಜಿ ಈ ದೇಶಕ್ಕೆ ಮಾಡಿದ ದ್ರೋಹವಾದರೂ ಏನು? ತಮ್ಮೆಲ್ಲಾ ವೈಯಕ್ತಿಕ ಜೀವನವನ್ನು ದೇಶಕ್ಕಾಗಿ ಧಾರೆಯೆರೆದು ಸ್ವಾತಂತ್ರ್ಯ ತಂದುಕೊಟ್ಟಿದ್ದೇ ಅವರ ತಪ್ಪೇ? ಸ್ವಾತಂತ್ರ್ಯೋತ್ತರ ಬೆಳವಣಿಗೆಗಳ ಬಗ್ಗೆ ಗಾಂಧೀಜಿ ಕುರಿತು ಅನೇಕರದಲ್ಲಿ ಅಸಮಾಧಾನ, ಭಿನ್ನಾಭಿಪ್ರಾಯಗಳಿರಬಹುದು ನಿಜ. ಆದರೆ ಅದೇ ಕಾರಣದಿಂದ ಗಾಂಧೀಜಿಯನ್ನು ಕೊಂದ ಗೋಡ್ಸೆಯನ್ನು ಆರಾಧಿಸಿಸುವ ದುಸ್ಸಾಹಸಕ್ಕೆ ಕೈ ಹಾಕುವುದು ಸರಿಯಲ್ಲ. ಗಾಂಧೀಜಿಯವರ ತತ್ವ ಸಿದ್ಧಾಂತಗಳು ಕೆಲವರಿಗೆ ಇಷ್ಟವಾಗಬಹುದು, ಕೆಲವರಿಗೆ ಇಷ್ಟವಾಗದೇ ಇರಬಹುದು. ಆದರೆ ಅವರು ರಾಷ್ಟ್ರಪಿತ ಎಂಬುದು ಸರ್ವ ಒಪ್ಪಿತ ಸತ್ಯ. ಅಲ್ಲದೇ, ಬ್ರಿಟಿಷರ ಸಂಕೋಲೆಯಿಂದ ಭಾರತವನ್ನು ಬಿಡಿಸಲು ಹೋರಾಡಿದ ಪ್ರತಿಯೊಬ್ಬರನ್ನೂ ಇಂದಿನ ಪೀಳಿಗೆ, ಮುಂದಿನ ಪೀಳಿಗೆ ಗೌರವಿಸಬೇಕಾದದ್ದೆ. ಈ ನೆಲದಲ್ಲಿ ಹುಟ್ಟಿದ ಪ್ರತಿಯೊಬ್ಬರೂ ಈ ನೆಲದ ಕಾನೂನು, ಇತಿಹಾಸ, ಹೋರಾಟ, ಪರಂಪರೆಗೆ ಬೆಲೆ ಕೊಟ್ಟು ಗೌರವಿಸಲೇಬೇಕು. ಅದು ಬಿಟ್ಟು ಯಾವುದೋ ಸಮುದಾಯ, ಧರ್ಮದ ಮೆಚ್ಚುಗೆ ಗಳಿಸಲು ಇಲ್ಲ ಸಲ್ಲದ ದುಸ್ಸಾಹಸಕ್ಕೆ ಕೈ ಹಾಕುವುದು ತರವಲ್ಲ. ಗೋಡ್ಸೆ ಪ್ರತಿಮೆ ಸ್ಥಾಪನೆ ಮಾಡುವುದೆಂದರೆ ಶಾಂತಿಯ ವಿರುದ್ಧದ ನಡೆಗೆ ಪ್ರಚೋದನೆ ನೀಡಿದಂತೆಯೇ. ಭಾರತವು ಅಂದು, ಇಂದು, ಮುಂದೆಯೂ ಶಾಂತಿಪ್ರಿಯ ರಾಷ್ಟ್ರ ಎಂದೇ ಹೆಸರು ಗಳಿಸಿದೆ. ಅದಕ್ಕೆ ಮಸಿ ಬಳಿಯುವ ಕೆಲಸಕ್ಕೆ ಇಂದಿನ ಯುವಪೀಳಿಗೆ ಕೈ ಹಾಕಬಾರದು. ಇಂದಿನ ಯುವಕರಿಗೆ ಗಾಂಧೀಜಿ ಆದರ್ಶವಾಗಬೇಕೇ ವಿನಾ ಗೋಡ್ಸೆಯಲ್ಲ. ಗೋಡ್ಸೆ ಆರಾಧಕರ ಬಗ್ಗೆ ಸರಕಾರ, ಪೊಲೀಸರು ಜಾಣಮೌನ ವಹಿಸಬಾರದು. ಸಸಿ ಇದ್ದಾಗಲೇ ಇಂತಹ ಯೋಚನೆಗಳನ್ನು ಚಿವುಟಿ ಹಾಕಲು ಪ್ರಯತ್ನಿಸಬೇಕು. ಇಲ್ಲವಾದಲ್ಲಿ ಗಾಂಧೀಜೀ ಅವರನ್ನು ಮುಂದಿನ ಪೀಳಿಗೆಗೆ ಬೇರೆ ರೀತಿ ಚಿತ್ರಿಸುವ ಅಪಾಯ ಇದೆ.

ಸೊಂಪಾದಕೀಯ

ಎತ್ತು ತಂದ ಕುತ್ತು

ವಿಧಾನಮಂಡಲ ಅಧಿವೇಶನದ ಮೊದಲ ದಿನ ಪ್ರತಿಭಟನೆಯದೇ ಗದ್ದಲ. ರೈತಸಂಘದವರು ರಾಷ್ಟ್ರವ್ಯಾಪಿ ಮುಷ್ಕರದ ಅಂಗವಾಗಿ ಪ್ರತಿಭಟನೆ ನಡೆಸಿದರು. ಇತ್ತ ಕಾಂಗ್ರೆಸ್ ಪಕ್ಷದವರ ಪ್ರತಿಭಟನೆ ಬೆಲೆ ಏರಿಕೆ ವಿರುದ್ಧ. ಇಂಥ ಸಂದರ್ಭದಲ್ಲೆಲ್ಲ ಎತ್ತಿನ ಗಾಡಿ ಹೂಡಿಕೊಂಡು ಬರುವುದು ವಾಡಿಕೆ. ಅದೇ ರೀತಿ ಕಾಂಗ್ರೆಸ್ ಮುಖಂಡರು ಎತ್ತಿಬಂಡಿಗಳಲ್ಲಿ ಬಂದರಾದರೂ ಅವರನ್ನು ತಡೆದ ಪರಿಣಾಮ ಒಂದೇ ಬಂಡಿಯಲ್ಲಿ ಎಲ್ಲ ನಾಯಕರು ಬಂದರು. ವಿಧಾನಸೌಧದೊಳಕ್ಕೆ ಬಿಡಲ್ಲ ಎಂದು ಪೊಲೀಸರ ಪಟ್ಟು, ನಾಯಕರ ಪ್ರತಿಪಟ್ಟು. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಬದುಕಿನ ಬಂಡಿ ಸಾಗಿಸಲು ಜನರು ಪರದಾಡುತ್ತಿರುವಾಗ ಎತ್ತಿನ ಬಂಡಿ ಚಳವಳಿ ಮಾಡುವುದು ಸಮಂಜಸ ಎಂದು ಭಾವಿಸಿರಬೇಕು. ತಪ್ಪೇನಿಲ್ಲ ಬಿಡಿ. ಆದರೆ ಒಂದೇ ಬಂಡಿಯನ್ನು ಬಹಳಷ್ಟು ಜನರು ಏರಿದ್ದರಿಂದ ಎಡವಟ್ಟಾಯಿತು. ಎತ್ತುಗಳು ಬೆದರಿದವೋ ಅಥವಾ ಹಿಂಬಂಡಿಯಾಯಿತೋ ಗೊತ್ತಿಲ್ಲ. ಪಾಪ, ಹಿಂದೆ ನಿಂತವರು ಕೆಳಕ್ಕೆ ಬಿದ್ದು ಬಿಟ್ಟರು. ಅಯ್ಯೋ ಎತ್ತಿನ ಬಂಡಿ ಪ್ರತಿಭಟನೆ ನಡೆಸುವುದು ದೊಡ್ಡದಲ್ಲ. ಆದರೆ ಅದನ್ನು ನಿಭಾಯಿಸುವುದು ಗೊತ್ತಿರಬೇಕು ಎಂದು ಕೆಲವರು ಆಡಿಕೊಂಡಿರಬಹುದು. ಮಣ್ಣಿನ ಮಕ್ಕಳ ಪಕ್ಷದವರಾದರೆ ಇದನ್ನು ಚೆನ್ನಾಗಿ ಮಾಡುತ್ತಿದ್ದರೋ ಏನೋ. ಅಷ್ಟೇಕೆ ಹುಟ್ಟು ಹೋರಾಟಗಾರ ವಾಟಾಳ್ ನಾಗರಾಜ್ ಅವರನ್ನು ಕರೆಸಿದ್ದರೆ ಅವರು ಸರಿಯಾದ ವ್ಯವಸ್ಥೆ ಮಾಡಿರೋರು. ಬಹಳ ಹುರುಪಿನಿಂದ ಕೈ ನಾಯಕರು ಈ ಚಳವಳಿ ಹಮ್ಮಿಕೊಂಡಿದ್ದರು. ಚಕ್ಕಡಿಗಳನ್ನು ಅಂದವಾಗಿ ಸಿಂಗರಿಸಲಾಗಿತ್ತು. ಎಲ್ಲರೂ ಒಗ್ಗಟ್ಟು ಪ್ರದರ್ಶಿಸಿದ್ದರು. ಆದರೆ ಬೆಲೆ ಏರಿಕೆಗಿಂತ ನಾಯಕರ ಕುಸಿತದ ಸುದ್ದಿಯೇ ದೊಡ್ಡದಾಗಿ ಬಿಟ್ಟಿತು. ಇದರ ಹಿಂದೆ ಸರಕಾರದ ಕೈವಾಡವಿದೆ ಎಂದು ಇದೀಗ ನಾಯಕರು ಆರೋಪಿಸಬಹುದು. ಅವರೇ ಬೇರೆ ಬೇರೆಯಾಗಿದ್ದರು. ಒಮದೇ ಗಾಡಿಗೆ ಅವಕಾಶ ಕೊಟ್ಟಿದ್ದರಿಂದ ಎಲ್ಲರು ಒಟ್ಟಾಗಿ ಬಮದಿದ್ದು ಎಂದು ಸರಕಾರ ಹೇಳಬಹುದು. ಏನೇ ಆಗಲಿ. ಈ ಪ್ರಕರಣದ ಬಗ್ಗೆ ವಿಚಾರಣೆ ಆಗಲೇಬೇಕು. ಒಂದೇ ಎತ್ತಿನಬಂಡಿಗೆ ಅವಕಾಶ ನೀಡಿದ್ದೇಕೆ ; ಓವರ್ ಲೋಡ್ ಆಗಿತ್ತಾ ; ಬರಿ ಹಿಂದಿದ್ದವರು ಮಾತ್ರ ಬಿದ್ದಿದ್ದೇಕೆ; ಎತ್ತುಗಳಿಗೆ ಈ ಬಗ್ಗೆ ತರಬೇತಿ ಇರಲಿಲ್ಲವಾ ; ಇದರಲ್ಲಿ ಸರಕಾರದ ಕೈವಾಡ ಏನಾದರೂ ಇದೆಯಾ..? ಎಂಬಿತ್ಯಾದಿ ವಿಷಯಗಳ ಕುರಿತು ತನಿಖೆ ಆಗಬೇಕು. ಹೆಚ್ಚೂ ಕಡಿಮೆ ಆಗಿದ್ದರೆ ಏನು ಗತಿ ? ವಿರೋಧ ಪಕ್ಷದ ನಾಯಕರಿಗೇ ರಕ್ಷಣೆ ಇಲ್ಲ ಎಂದರೆ ಹೇಗೆ ? ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಪ್ರತಿಪಕ್ಷ ನಾಯಕರು ಸದನದಲ್ಲಿ ಗಮನ ಸೆಳೆಯುವ ಸೂಚನೆ ಮಂಡಿಸಬೇಕು. ಎತ್ತು, ಎತ್ತಿಬಂಡಿಗೆ ಕಿಮ್ಮತ್ತು ಇಲ್ವಾ ಎಂಬ ವಿಷಯವನ್ನು ಎಲ್ಲರೂ ಎತ್ತಬೇಕು.

ಸಂಪಾದಕರ ಸದ್ಯಶೋಧನೆ

ಆಸ್ಕರ್ : ಕೆಲ ನೆನಪುಗಳು

ವೆರೊನ್ನೆ ನಿಧನರಾದ ಕಾಂಗ್ರೆಸ್ ನಾಯಕ ಆಸ್ಕರ್ ಫರ್ನಾಂಡಿಸ್ ಬಗ್ಗೆ ಪತ್ರಿಕೆಗಳಲ್ಲಿ ಓದುತ್ತಿದ್ದೆ. ದಿಲ್ಲಿ ಪತ್ರಿಕೆಗಳು ಸೇರಿ, ಎಲ್ಲಾ ಪತ್ರಿಕೆಗಳೂ ಅವರ ಬಗ್ಗೆ ಮುಕ್ತಕಂಠದಿಂದ ಹೊಗಳಿ ಬರೆದಿದ್ದವು. ಸಾಮಾನ್ಯವಾಗಿ, ನಾಯಕರು ನಿಧನರಾದಾಗ, ಯಾರೂ ಟೀಕಿಸುವುದಿಲ್ಲ ಅಥವಾ ನಿಧನರಾದವರ ದುರ್ಗುಣಗಳನ್ನು ಎತ್ತಿ ಬರೆಯುವುದಿಲ್ಲ. ಆದರೆ ಸುಮಾರು ನಾಲ್ಕು ದಶಕಗಳ ಕಾಲ ಸಾರ್ವಜನಿಕ ಜೀವನದಲ್ಲಿದ್ದ, ಆಸ್ಕರ್ ಫರ್ನಾಂಡಿಸ್ ವಿಷಯದಲ್ಲಿ ಹಾಗೆ ಬರೆಯುವಂಥದ್ದೂ ಇರಲಿಲ್ಲ. ಅವರನ್ನು ಅವರ ಸಮ್ಮುಖದಲ್ಲಿಯೇ ಟೀಕಿಸಿದರೂ, ಅವರು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಒಮ್ಮೆ ನಾನು ಅವರ ದಿಲ್ಲಿಯ ಮನೆಗೆ ಹೋಗಿದ್ದಾಗ, ಕರ್ನಾಟಕದ ರಾಜಕಾರಣಿಯೊಬ್ಬರು, ನನ್ನ ಬಗ್ಗೆ ನೀವು ಹೈಕಮಾಂಡ್ ನಾಯಕರ ಮುಂದೆ ಪರಿಣಾಮಕಾರಿಯಾಗಿ ವಕಾಲತ್ತು ವಹಿಸಲಿಲ್ಲ. ಅದಕ್ಕಾಗಿಯೇ ನನಗೆ ಅವಕಾಶ ತಪ್ಪಿ ಹೋಯಿತು. ನಿಮ್ಮಿಂದ ಇಂಥ ಧೋರಣೆಯನ್ನು ನಿರೀಕ್ಷಿಸಿರಲಿಲ್ಲ' ಎಂದು ಅವರ ಮುಂದೆಯೇ ಏರಿದ ದನಿಯಲ್ಲಿ ಹೇಳಿದರು. ನಾನು ಅವರ ಪ್ರತಿಕ್ರಿಯೆ ಏನಿರಬಹುದು ಎಂದು ಕುತೂಹಲದಿಂದ ಗಮನಿಸುತ್ತಿದ್ದೆ. ಆದರೆ ಆಸ್ಕರ್ ಏನೂ ಹೇಳಲಿಲ್ಲ. ಆ ನಾಯಕರು ಅಷ್ಟಕ್ಕೇ ಸುಮ್ಮನಾಗದೇ , ಏನೋ ಗೊಣಗುತ್ತಲೇ ಇದ್ದರು. ಆದರೆ ಆಸ್ಕರ್ ಮಾತ್ರ ಸುಮ್ಮನೆ ಕೇಳುತ್ತಿದ್ದರು. ಅವರು ಹೋದ ನಂತರ, ನಾನು ಆಸ್ಕರ್ ಅವರನ್ನು ಕೇಳಿದೆ – ಸಾರ್, ಅವರು ಅಷ್ಟೆಲ್ಲಾ ಮಾತಾಡಿದರೂ, ನೀವು ಏನೂ ಹೇಳಲೇ ಇಲ್ಲವಲ್ಲ.' ಅದಕ್ಕೆ ಆಸ್ಕರ್‌ಹೇಳಿದರು – ನಿಜ, ಅವರಿಗೆ ಬೇಸರವಾಗಿದೆ. ನಾನು ಏನೇ ಹೇಳಿದರೂ ಪ್ರಯೋಜನವಿಲ್ಲ. ಈ ಸಂದರ್ಭದಲ್ಲಿ ಅವರಿಗೆ ಸಮಾಧಾನವಾಗಬೇಕು ಅಂದ್ರೆ ಅವರು ಹೇಳಿದ್ದೆಲ್ಲವನ್ನೂ ಕೇಳಿಸಿಕೊಳ್ಳಬೇಕು. ಅವರ ಬೈಗುಳಗಳನ್ನು ಕೇಳಿಸಿಕೊಂಡು ಸುಮ್ಮನಾಗಬೇಕು. ನಾನು ಅದನ್ನೇ ಮಾಡಿದ್ದೇನೆ.' ದಿಲ್ಲಿ ರಾಜಕಾರಣವನ್ನು ಆಸ್ಕರ್ ಬಹಳ ಚೆಂದವಾಗಿ ಅರ್ಥ ಮಾಡಿಕೊಂಡಿದ್ದರು. ಜನರ ಮನಸ್ಥಿತಿ ಸಂದರ್ಭಕ್ಕೆ ತಕ್ಕ ಹಾಗೆ ಬದಲಾಗಿತ್ತದೆ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಭಟ್ರೇ, ಈ ರಾಜಕಾರಣಿಗೆ ನಾನು ಮುಂದೊಮ್ಮೆ ಟಿಕೆಟ್ ಕೊಡಿಸುತ್ತೇನೆ. ಆಗ ನೀವು ನೋಡಬೇಕು, ಇದೇ ಮನುಷ್ಯ ಬಂದು ನನ್ನನ್ನು ಹಾಡಿ ಹೊಗಳುತ್ತಾನೆ. ಶಾಲು ಹೊದಿಸಿ, ಹಣ್ಣಿನ ದೊಡ್ಡ ಬುಟ್ಟಿ ಕೊಡುತ್ತಾನೆ. ನನ್ನ ಬಗ್ಗೆ ಎಲ್ಲರ ಮುಂದೆ ಹೊಗಳುತ್ತಾ ಹೋಗುತ್ತಾನೆ. ರಾಜಕಾರಣದಲ್ಲಿ ಜನರನ್ನು ನಿಭಾಯಿಸುವುದು ಅಂದ್ರೆ ಇಷ್ಟೇ. ಯಾರ ಮಾತು ಮತ್ತು ನಡೆವಳಿಕೆ ಯಾವತ್ತೂ ಒಂದೇ ರೀತಿ ಇರುವುದಿಲ್ಲ' ಎಂದು ಆಸ್ಕರ್ ಹೇಳಿದ್ದರು. ಒಮ್ಮೆ ನಾನು ದಿಲ್ಲಿಗೆ ಹೋದಾಗ, ಅವರನ್ನು ಭೇಟಿ ಮಾಡಲು ಬಯಸಿದ್ದೆ. ಆಗ ಅವರು ಕೇಂದ್ರದಲ್ಲಿ ಸಚಿವರಾಗಿದ್ದರು. ರಾತ್ರಿ ಒಂಬತ್ತು ಗಂಟೆಗೆ ಬರುವಂತೆ ಹೇಳಿದರು. ಆಗ ನನಗೆ ಆಶ್ಚರ್ಯವಾಗಿತ್ತು. ನಂತರ ನನಗೆ ಗೊತ್ತಾಗಿದ್ದೇನೆಂದರೆ, ಆಸ್ಕರ್ ಅವರು ರಾತ್ರಿಯೆಲ್ಲ ಆಫೀಸಿನಲ್ಲಿ ಕಾರ್ಯಮಗ್ನರಾಗಿರುತ್ತಿದ್ದರು. ಅಂದು ನಾನು ಆಸ್ಕರ್ ಅವರ ಆಫೀಸಿನಿಂದ ಹೊರಟಾಗ, ರಾತ್ರಿ ಹನ್ನೆರಡೂವರೆ ಆಗಿತ್ತು! ನಾನು ಕನ್ನಡ ಪ್ರಭ' ಮತ್ತು ಸುವರ್ಣ ನ್ಯೂಸ್ ಚಾನೆಲ್' ಪ್ರಧಾನ ಸಂಪಾದಕನಾಗಿದ್ದಾಗ, ಆಸ್ಕರ್ ಕಚೇರಿಗೆ ಬಂದಿದ್ದರು. ಅವರ ಜತೆ ಲೋಕಾಭಿರಾಮ ಮಾತಾಡುವಾಗ, ನಮ್ಮ ಮಾತುಕತೆ ಅವರ ಯೋಗಾಭ್ಯಾಸದ ಕಡೆ ತಿರುಗಿತು. ಅವರು ನನ್ನ ಕ್ಯಾಬಿನ್ ನಲ್ಲಿಯೇ ಕೆಲವು ಕಷ್ಟಕರವಾದ, ಆದರೆ ಅವರು ಒಲಿಸಿಕೊಂಡ ಆಸನಗಳನ್ನು ಮಾಡಿ ತೋರಿಸಿದರು. ಸುಮಾರು ಹದಿನೈದು ನಿಮಿಷ ಆರೇಳು ಆಸನಗಳನ್ನು ಮಾಡಿ ಅಚ್ಚರಿ ಮೂಡಿಸಿದ್ದರು. ಟೀಕಾತೀತರಾದ ರಾಜಕಾರಣಿ ಇಲ್ಲ. ಆದರೆ ಆಸ್ಕರ್ ಬಗ್ಗೆ ಯಾವುದೇ ಗುರುತರ ಆಪಾದನೆ ಇಲ್ಲ ಎನ್ನುವುದೂ ಅಷ್ಟೇ ಸತ್ಯ.

ಶಿವನಸಮುದ್ರ ಯೋಜನೆಗೂ ಮದ್ರಾಸ್ ಅಡಚಣೆಯೊಡ್ಡಿತ್ತು!

ತನ್ನಿಮಿತ್ತ

ಗಜಾನನ ಶರ್ಮ

vveditoped@gmail.com

ಕನ್ನಂಬಾಡಿ ಅಣೆಕಟ್ಟೆ ನಿರ್ಮಾಣಕ್ಕೆ ಮದ್ರಾಸು ಸರಕಾರ ಪದೇಪದೆ ಅಡಚಣೆ ಒಡ್ಡಿದ್ದು, ಮಾದರಿ ಮೈಸೂರಿನ ನಿರ್ಮಾತೃಗಳಾದ ನಾಲ್ವಡಿಯವರ ನಿರ್ದೇಶನದಡಿ ಸರ್ ಎಂ.ವಿಶ್ವೇಶ್ವರಯ್ಯನವರು ಸ್ವತಃ ವಾದ ಮಾಡಿ ಬ್ರಿಟಿಷ್ ಸರಕಾರ ನೇಮಿಸಿದ ನ್ಯಾಯ ಪಂಚಾಯತಿಯಲ್ಲಿ ಮೈಸೂರಿಗೆ ಗೆಲುವನ್ನು ದಕ್ಕಿಸಿಕೊಟ್ಟು ಕನ್ನಂಬಾಡಿಯನ್ನು ಯಶಸ್ವಿಯಾಗಿ ನಿರ್ಮಿಸಿದ್ದು ಈಗ ಇತಿಹಾಸ. ಆದರೆ, ಕನ್ನಂಬಾಡಿಗೂ ಮೊದಲು ಶಿವನ ಸಮುದ್ರ ವಿದ್ಯುದಾಗಾರ ನಿರ್ಮಾಣದ ಸಂದರ್ಭದಲ್ಲೂ ಮದ್ರಾಸು ಹಲವು ಬಗೆಯಲ್ಲಿ ವಿರೋಧ ವ್ಯಕ್ತಪಡಿಸಿದ್ದು ಬಹಳ ಜನಕ್ಕೆ ತಿಳಿದಿಲ್ಲ.

1892ರಲ್ಲಿ ಕಾವೇರಿ ನೀರು ಹಂಚಿಕೆಯ ಸಂಬಂಧ ಮೈಸೂರು ಸಂಸ್ಥಾನ ಮತ್ತು ಬ್ರಿಟಿಷರ ನೇರ ಆಡಳಿತಕ್ಕೆ ಸೇರಿದ್ದ ಮದ್ರಾಸು ಪ್ರಾಂತ್ಯ (ಮದ್ರಾಸ್ ಪ್ರಾವಿನ್ಸ್)ಗಳ ನಡುವೆ ಒಪ್ಪಂದವೊಂದು ಏರ್ಪಟ್ಟಿತ್ತು. ಆದರೆ, ಆ ಒಪ್ಪಂದ ಅದೆಷ್ಟು ಏಕಪಕ್ಷೀಯವಾಗಿತ್ತೆಂದರೆ ಮುಂದೆ ಮೈಸೂರು ಸಂಸ್ಥಾನ ಶಿವನಸಮುದ್ರ ಜಲವಿದ್ಯುತ್ ಯೋಜನೆ ಆರಂಭಿಸಲು ಹೊರಟಾಗ ಕಾವೇರಿ ನೀರಿನ ಹರಿವಿನ ಪ್ರಮಾಣವನ್ನು ಅಳತೆ ಮಾಡಲೂ ಅಂದಿನ ಮದ್ರಾಸು ಸರಕಾರ ಸುಲಭಕ್ಕೆ ಅನುಮತಿ ಕೊಡಲಿಲ್ಲ.

1894ರಲ್ಲಿ ಎಡ್ಮಂಡ್ ಚಾರಿಂಗ್ಟನ್ ಎಂಬಾತ ಶಿವನಸಮುದ್ರ ಜಲಪಾತ ಬಳಸಿ ವಿದ್ಯುತ್ ಉತ್ಪಾದಿಸಲು ಅರ್ಜಿ ಸಲ್ಲಿಸಿದ್ದ. ಅದರನ್ವಯ ಮೈಸೂರು ಸಂಸ್ಥಾನದ ಮುಖ್ಯ ಎಂಜಿನಿಯರಾಗಿದ್ದ ಕರ್ನಲ್ ಬೋವೆನ್ ಮೊದಲ ಬಾರಿಗೆ ಕಾವೇರಿ ಹರಿವಿನ ಪ್ರಮಾಣವನ್ನು ಅಳತೆ ಮಾಡಿದ್ದ. ಈ ಅಳತೆಯ ನಿಖರತೆಯ ಕುರಿತು ಸಾಕಷ್ಟು ಸಂಶಯ ವ್ಯಕ್ತವಾಗಿದ್ದರಿಂದ ಮತ್ತೆ ಅಳತೆ ಮಾಡುವುದು ಅನಿವಾರ್ಯವಾಗಿತ್ತು. ಮುಂದೆ ಶಿವನಸಮುದ್ರ ವಿದ್ಯುತ್ ಯೋಜನೆಯನ್ನು ಮೈಸೂರು ದರ್ಬಾರು ಸ್ವತಃ ಅನುಷ್ಠಾನಗೊಳಿಸಲು ನಿಶ್ಚಯಿಸಿತು. ಆದರೆ, ನಿಖರವಾಗಿ ನೀರಿನ ಹರಿವಿನ ಪ್ರಮಾಣ ತಿಳಿಯದೆ ಉತ್ಪಾದಿಸಬಹುದಾದ ವಿದ್ಯುತ್ ಪ್ರಮಾಣ ನಿರ್ಧರಿಸಲಾಗುತ್ತಿರಲಿಲ್ಲ.

ಕೆಜಿಎಫ್‌ನ ಚಿನ್ನದ ಗಣಿ ಮಾಲೀಕರಾಗಿದ್ದ ಜಾನ್ ಟೇಲರ್ ಕಂಪನಿಯವರು ತಮಗೆ ಕನಿಷ್ಠ 4000 ಎಚ್‌ಪಿ ವಿದ್ಯುತ್ ನೀಡಿದರೆ ಪ್ರತಿ ಎಚ್‌ಪಿ ವಿದ್ಯುತ್ತಿಗೆ ಮೊದಲ ವರ್ಷ 29 ಪೌಂಡ್ (435 ರುಪಾಯಿ) ಮತ್ತು ಮುಂದೆ ಕೆಲವು ವರ್ಷ 18 ಪೌಂಡ್ (260 ರುಪಾಯಿ) ನೀಡುವುದಾಗಿ ಮೈಸೂರು ಸರಕಾರಕ್ಕೆ ಕೋರಿಕೆ ಸಲ್ಲಿಸಿದ್ದರು. ಇದು ಅಂದಿನ ಆರ್ಥಿಕ ಸಂಕಷ್ಟದ ದಿನಗಳಲ್ಲಿ ಮೈಸೂರು ಸರಕಾರಕ್ಕೆ ಆಶಾದಾಯಕ ಬೆಳವಣಿಗೆಯಾಗಿತ್ತು. ಶಿವನಸಮುದ್ರದಲ್ಲಿ ಲಭ್ಯವಿದ್ದ ಎತ್ತರ (ಹೆಡ್)ದಲ್ಲಿ ಅಷ್ಟು ಪ್ರಮಾಣದ ವಿದ್ಯುತ್ ಉತ್ಪಾದಿಸಲು ಕನಿಷ್ಠ 181 ಕ್ಯೂಸೆಕ್ ನೀರು ಅಗತ್ಯವಿತ್ತು. ಮಳೆಗಾಲದಲ್ಲಿ ನೀರಿನ ಕೊರತೆ ಇರದಿದ್ದರೂ ಬೇಸಿಗೆಯಲ್ಲಿ ಈ ಪ್ರಮಾಣದ ನೀರು ದೊರೆಯುವುದನ್ನು ಖಾತ್ರಿ ಪಡಿಸಿಕೊಳ್ಳದೇ ಮೈಸೂರು ಸಂಸ್ಥಾನ ಮುಂದಿನ ಹೆಜ್ಜೆ ಇರಿಸುವಂತಿರಲಿಲ್ಲ. ಹಾಗಾಗಿ ಕಾವೇರಿ ಹರಿವಿನ ನಿಖರ ಮಾಪನದ ಅಗತ್ಯವಿತ್ತು. ನೀರಿನ ಅಳತೆಗಾಗಿ ಅಂದಿನ ಮಾಪನದ ಪದ್ಧತಿಯಲ್ಲಿ ಎರಡು ತಾತ್ಕಾಲಿಕ ಒಡ್ಡುಗಳನ್ನಾದರೂ ನಿರ್ಮಿಸಿಕೊಳ್ಳುವುದು ಅತ್ಯಗತ್ಯವಾಗಿತ್ತು.

1892ರ ಒಪ್ಪಂದದ ಪ್ರಕಾರ ಈ ತಾತ್ಕಾಲಿಕ ಒಡ್ಡುಗಳ ನಿರ್ಮಾಣಕ್ಕೂ ಮದ್ರಾಸಿನ ಅನುಮತಿಯ ಅಗತ್ಯವಿತ್ತು. ಹಾಗಾಗಿ ಅವರ ಅನುಮತಿಗೆ ಕೋರಿಕೆ ಸಲ್ಲಿಸಿದ ಮೈಸೂರು ಸಂಸ್ಥಾನಕ್ಕೆ ಅಚ್ಚರಿ ಕಾದಿತ್ತು. ನೀರಿನ ಹರಿವಿನ ಮಾಪನದ ಕಾರಣಕ್ಕೆ ತಾತ್ಕಾಲಿಕ ಒಡ್ಡು ನಿರ್ಮಾಣಕ್ಕೂ ಮದ್ರಾಸು ಸರಕಾರ ಅನುಮತಿ ನಿರಾಕರಿಸಿತ್ತು. ಆ ಕಾಲದಲ್ಲಿ ನದಿಯ ನೀರು ಇಡೀ ನದಿಯ ಪಾತ್ರದುದ್ದಕ್ಕೂ ಹರಿಯುತ್ತಿದ್ದರೆ ಅದರ ಅಳತೆ ಸಾಧ್ಯವಾಗುತ್ತಿರಲಿಲ್ಲ. ನೀರಿನ ಪ್ರಮಾಣವನ್ನು ನಿಖರವಾಗಿ ಅಳೆಯಲು ಒಂದೇ ಜಾಗದಲ್ಲಿ ಆಂಗ್ಲ ಭಾಷೆಯ 'ವಿ' ಆಕಾರದ ವಿಯರ್ ಮೂಲಕ ನೀರನ್ನು ಹರಿಸಿ ಹರಿವಿನ ಪ್ರಮಾಣವನ್ನು ಅಳೆಯಬೇಕಿತ್ತು (ಈಗ ಬೇರೆ ಮಾದರಿಯಲ್ಲೂ ಅಳತೆ ಸಾಧ್ಯವಿದೆಯಾದರೂ ಆಗಿನ ತಾಂತ್ರಿಕತೆಯಲ್ಲಿ ನೀರನ್ನು 'ವಿಯರ್' ಮೂಲಕ ಹರಿಸಿಯೇ ಅಳೆಯುವುದು ಅನಿವಾರ್ಯವಾಗಿತ್ತು)

ಶಿವನಸಮುದ್ರದಲ್ಲಿ ಕಾವೇರಿ ಎರಡು ಕವಲಾಗಿ ಹರಿಯುತ್ತಿದ್ದರಿಂದ ಎರಡೂ ಕವಲುಗಳಲ್ಲಿ ಈ ವ್ಯವಸ್ಥೆ ಅನಿವಾರ್ಯವಾಗಿತ್ತು. ನೀರು ಹಾಗೆ ಒಂದೇ ಜಾಗದಲ್ಲಿ ಹರಿಯುವಂತೆ ಮಾಡಲು ತಾತ್ಕಾಲಿಕ ಒಡ್ಡಿನ ನಿರ್ಮಾಣ ಅನಿವಾರ್ಯವಾಗಿತ್ತು. ದುರದೃಷ್ಟವಶಾತ್ ಅದಕ್ಕೂ ಮದ್ರಾಸಿನ ಅನುಮತಿ ಇರಲಿಲ್ಲ. ಹಾಗಾಗಿ ಅಂದಿನ ಸಂಸ್ಥಾನದ ಆಡಳಿತ ಮರಳು ಚೀಲಗಳನ್ನು ಪೇರಿಸಿ, ತಾತ್ಕಾಲಿಕ ವ್ಯವಸ್ಥೆಯೊಂದನ್ನು ಕಲ್ಪಿಸಿಕೊಳ್ಳಲು ತೀರ್ಮಾನಿಸಿತು.

ಇಂತಹದೊಂದು ತಾತ್ಕಾಲಿಕ ಕ್ರಮದಿಂದ ಅಳತೆಯ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದಾದರೂ, ವಿದ್ಯುತ್ ಉತ್ಪಾದಿಸುವ ಮುಂದಿನ ಹಂತ ಸುಲಭವಿರಲಿಲ್ಲ. ಯಾಕೆಂದರೆ ಸೂರ್ಯ ಮುಳುಗದ ಸಾಮ್ರಾಜ್ಯದ ನೇರ ಆಡಳಿತದಲ್ಲಿರುವ ಮದ್ರಾಸೆಂಬ ಮದ್ರಾಸಿಗೇ ಸಾಧ್ಯವಾಗದ ಸಾಹಸವೊಂದನ್ನು ಒಡೆಯರ್ ಆಡಳಿತದ ಪುಟ್ಟ ಮೈಸೂರು ಸಂಸ್ಥಾನ ಕೈಗೊಳ್ಳುವುದು ಮದ್ರಾಸಿನ ಅಹಂಕಾರಕ್ಕೆ ಹೊಡೆತವಾಗಿತ್ತು. ಹಾಗಾಗಿ ಅದೀಗ ಇನ್ನೊಂದು ಖ್ಯಾತೆ ತೆಗೆಯಿತು.

ಶಿವನಸಮುದ್ರ ಆ ಕಾಲದಲ್ಲಿ ಒಬ್ಬ ಜಾಗೀರುದಾರನ ಅಧೀನದಲ್ಲಿತ್ತು ಮತ್ತು ಆತ ಮದ್ರಾಸು ಪ್ರಾಂತ್ಯದ ಅಡಿಯಾಳಾಗಿ ಬದುಕುವುದರಲ್ಲೇ ಸಾರ್ಥಕತೆ ಕಂಡುಕೊಂಡಿದ್ದ. ಜತೆಗೆ ಅಂದಿನ ಗಡಿಲೆಕ್ಕಾಚಾರದಲ್ಲಿ ಶಿವನಸಮುದ್ರದ ಸಮೀಪ ಕಾವೇರಿಯ ಉತ್ತರ ವಾಹಿನಿ (ಉತ್ತರದ ಕವಲು) ಅಂದು ಮದ್ರಾಸಿಗೆ ಒಳಪಟ್ಟ ನೆಲದಲ್ಲಿ ಹರಿಯುತ್ತಿತ್ತು. ವಿದ್ಯುತ್ ಉತ್ಪಾದಿಸಲು ಉತ್ತರ ವಾಹಿನಿಯ ನೀರನ್ನೂ ದಕ್ಷಿಣವಾಹಿನಿಗೆ ತಿರುವಿ, ಅಲ್ಲಿಂದ ವಿದ್ಯುತ್ ಉತ್ಪಾದಿಸುವ ಪೆನ್ ಸ್ಟಾಕ್‌ಗೆ ಹರಿಸಬೇಕಿತ್ತು. ಅದಕ್ಕಾಗಿ ಮತ್ತೆ ಮದ್ರಾಸಿನ ಅನುಮತಿ ಅನಿವಾರ್ಯವಾಗಿತ್ತು. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಮೈಸೂರು ವಿದ್ಯುತ್ ಉತ್ಪಾದಿಸುವುದರಿಂದ ಮದ್ರಾಸಿಗೆ ಹನಿ ನೀರಿನ ಕೊರತೆಯೂ ಆಗುತ್ತಿರಲಿಲ್ಲ. ಇನ್ನೂ ಹೇಳುವುದಾದರೆ ಮೇಲ್ಭಾಗದಲ್ಲಿ ಬೇಸಿಗೆ ಬೆಳೆಯನ್ನು ರದ್ದುಗೊಳಿಸಿದ ಹೆಚ್ಚುವರಿ ನೀರೂ ಅದಕ್ಕೆ ಲಭಿಸುತ್ತಿತ್ತು. ಆದರೂ ಮೈಸೂರಿಗೆ ಅನುಕೂಲವಾಗುವುದು ಅವರಿಗೆ ಬೇಕಿರಲಿಲ್ಲ. ನಮ್ಮ ಮನೆಯ ಹುಡುಗ ಫೇಲಾದರೂ ಸರಿ, ಪಕ್ಕದ ಮನೆಯ ಹುಡುಗ ರ‍್ಯಾಂಕ್ (rank) ಬರಬಾರದು. ಇದು ಮದ್ರಾಸಿನವರ ಮನೋಭಾವದ ಎರಡನೆಯ ಬಾರಿ ಕೋರಿಕೆ ಸಲ್ಲಿಸುವಾಗ ಮೈಸೂರು ತುಂಬ ಮುನ್ನೆಚ್ಚರಿಕೆ ವಹಿಸಿತು. ತನಗೆ ಲಭಿಸುವ ಲಾಭದಲ್ಲಿ ಪಾಲುಕೊಡಲು ತೀರ್ಮಾನಿಸಿತು. ಮದ್ರಾಸು ಸರಕಾರಕ್ಕೆ ಒಪ್ಪಿಗೆ ಕೇಳುವಾಗಲೇ, 'ತಾನು ಉತ್ತರ ವಾಹಿನಿಯಿಂದ ದಕ್ಷಿಣವಾಹಿನಿಗೆ ನೀರು ಹರಿಸುವುದರಿಂದ ಮೈಸೂರು ದರ್ಬಾರಿಗೆ ವಾರ್ಷಿಕ 15,000 ರುಪಾಯಿ ಆದಾಯ ಬರುವುದೆಂದೂ, ಅದಕ್ಕಾಗಿ ತಾನು ಮದ್ರಾಸಿಗೆ ವಾರ್ಷಿಕ 500 ರುಪಾಯಿಗಳ ಬಾಡಿಗೆ ತೆರಲು ಸಿದ್ಧವಿದ್ದೇನೆ' ಎಂದೂ ಹೇಳಿತು. ಆದರೆ, ಮದ್ರಾಸಿನ ಅಹಂಕಾರ ಈ ಕೋರಿಕೆಗೂ ತಣಿಯಲಿಲ್ಲ. ನೀರಿನ ಹರಿವಿನ ಪ್ರಮಾಣದ ಅಳತೆಯನ್ನು ಮರಳುಚೀಲ ಪೇರಿಸಿಯಾದರೂ ಮಾಡಬಹುದಿತ್ತು. ಆದರೆ, ಬೇಸಿಗೆಯಲ್ಲಿ ವಿದ್ಯುತ್ ಉತ್ಪಾದನೆಗೆ ಮಳೆಗಾಲದ ನೀರು ಸಂಗ್ರಹಿಸಲೇಬೇಕಿತ್ತು. ಅದಕ್ಕಾಗಿ ಕಾವೇರಿ ನದಿಯು ಕವಲೊಡೆಯುತ್ತಿದ್ದ ತಾಣಕ್ಕೂ ಮೊದಲೇ ಒಂದು ಅಣೆಕಟ್ಟೆ ಕಟ್ಟಬೇಕಿತ್ತು. ಆದರೆ, ನೀರಿನ ಅಳತೆಗೆ ಅಗತ್ಯವಿದ್ದ ತಾತ್ಕಾಲಿಕ ಒಡ್ಡಿಗೇ ಆಸ್ಪದ ನೀಡದ ಮದ್ರಾಸು ಇನ್ನು ನಿರಂತರ ನೀರು ಸಂಗ್ರಹಿಸುವ ಡ್ಯಾಮಿನ ನಿರ್ಮಾಣಕ್ಕೆ ಅನುಮತಿ ನೀಡೀತೇ?

ಮೈಸೂರು ಸಂಸ್ಥಾನ ದಿನಾಂಕ 24-3-1900 ರಿಂದ ಮರಳು ಚೀಲ ಪೇರಿಸಿ ತಾತ್ಕಾಲಿಕವಾಗಿ ನೀರನ್ನು ಒಂದು ಕಡೆ ಹರಿಸಿ ನೀರಿನ ಹರಿವಿನ ಪ್ರಮಾಣವನ್ನು ಅಳೆಯುವ ಕೆಲಸ ಆರಂಭಿಸಿತು. ಈ ಅಳತೆಯಿಂದ ಬೇಸಿಗೆಯ ನೀರಿನ ಹರಿವು ಕೇವಲ 95 ಕ್ಯೂಸೆಕ್ ಎಂಬುದು ತಿಳಿಯಿತು. ಆದರೆ 4000 ಎಚ್‌ಪಿ ವಿದ್ಯುತ್ ಉತ್ಪಾದಿಸಲು ಕನಿಷ್ಠ 181 ಕ್ಯೂಸೆಕ್ ನೀರು ಬೇಕೇಬೇಕಿತ್ತು. ಲಭ್ಯ ನೀರಿನ ಪ್ರಮಾಣದಂತೆ ಕನಿಷ್ಠ ಎರಡು ತಿಂಗಳು 2000 ಎಚ್‌ಪಿ ಕೊರತೆಯಾಗುತ್ತಿತ್ತು. ಜಾನ್ ಟೇಲರ್ ಕಂಪನಿಯೊಂದಿಗಿನ ಒಪ್ಪಂದದಂತೆ ಇದನ್ನು ಸರಿದೂಗಿಸಲು ಬೇಸಿಗೆಯಲ್ಲಿ ಒಪ್ಪಂದಕ್ಕೆ ಬದ್ಧವಾಗಲು ಕನಿಷ್ಠ 2000 ಎಚ್‌ಪಿ ಉತ್ಪಾದಿಸಲು ಉಷ್ಣ ವಿದ್ಯುದಾಗಾರವೊಂದನ್ನು ಸ್ಥಾಪಿಸಬೇಕಾಗುತ್ತಿತ್ತು. ಆದರೆ, ಅದಕ್ಕೆ ವಿಪರೀತ ವೆಚ್ಚ ತಗಲುತ್ತಿತ್ತು. ಅಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಮೈಸೂರು ಸಂಸ್ಥಾನಕ್ಕೆ ಅದು ಕಷ್ಟಸಾಧ್ಯವಾಗಿತ್ತು. ಮೈಸೂರಿನ ಈ ತಾಪತ್ರಯಗಳಿಗೆ ಸ್ಪಂದಿಸುವ ಮನಸ್ಥಿತಿ ಮದ್ರಾಸಿಗೆ ಕಿಂಚಿತ್ತೂ ಇರಲಿಲ್ಲ.

ಮೈಸೂರು ಆಡಳಿತ ಇಕ್ಕಟ್ಟಿನಲ್ಲಿ ಸಿಕ್ಕಿಬಿದ್ದಿತ್ತು. ಅದರಿಂದ ಹೊರಬರಲು ಅದರೆದುರು ಎರಡು ಆಯ್ಕೆಗಳಿದ್ದವು. ಶಿವನಸಮುದ್ರಕ್ಕಿಂತ ಮೇಲ್ಭಾಗದಲ್ಲಿ ಕಾವೇರಿ ನದಿಗೆ, ಹಿಂದೆ ಆಳಿದ ರಾಜಮಹಾರಾಜರು ಮತ್ತು ಮಂತ್ರಿಮಹಾಶಯರು ನಿರ್ಮಿಸಿದ ಒಟ್ಟು ಹನ್ನೆರಡು ಪುಟ್ಟ ಅಣೆಕಟ್ಟೆಗಳಿದ್ದವು. (ಧನಗೆರೆ, ಮಾಧವಮಂತ್ರಿ ಮುಂತಾದ ಪಿಕ್ ಅಪ್ ಅಣೆಕಟ್ಟುಗಳು) ಜಲಪಾತಕ್ಕಿಂತ 20 ಮೈಲುಗಳ ಮೇಲ್ಭಾಗದ ತಲಕಾಡಿನಲ್ಲಿದ್ದ ಮಾಧವಮಂತ್ರಿ ಅಣೆಕಟ್ಟೆಯನ್ನು ಒಂದೂವರೆ ಅಡಿಯಷ್ಟು ಎತ್ತರಿಸಿ, ಅದರ ಶೇಖರಣಾ ಸಾಮರ್ಥ್ಯವನ್ನು 313 ದಶಲಕ್ಷ ಘನ ಅಡಿಗೆ ಹೆಚ್ಚಿಸಬಹುದೆಂದು ಮೈಸೂರು ಸರಕಾರ ಅಂದಾಜಿಸಿತು.

ಕೆಜಿಎಫ್ ಕೋರಿಕೆಯಂತೆ 4000 ಎಚ್‌ಪಿ ಉತ್ಪಾದನೆಗೆ ಅಗತ್ಯವಾದ ನೀರಿನ ಪ್ರಮಾಣ 181 ಕ್ಯೂಸೆಕ್.

ಬೇಸಿಗೆಯ ಹರಿವು 95 ಕ್ಯೂಸೆಕ್.ಆಗಿದ್ದರೆ ಇನ್ನೂ 86 ಕ್ಯೂಸೆಕ್ ಹೆಚ್ಚುವರಿ ನೀರು ಅಗತ್ಯವಾಗುತ್ತಿತ್ತು. ಈ ಪ್ರಕಾರ ದಿನವಹಿ ನೀರಿನ ಕೊರತೆ, 86*24*60*60= 7.43 ದಶಲಕ್ಷ ಕ್ಯೂಸೆಕ್ ಆಗುತ್ತಿತ್ತು.

ಮಾಧವಮಂತ್ರಿ ಕಟ್ಟೆಯ ಶೇಕರಣೆ ಕೇವಲ 313 ದಶಲಕ್ಷ ಕ್ಯೂಸೆಕ್ ಅಂದರೆ ಈ ನೀರು (31367.43= 42) ಕೇವಲ ದಿನಗಳಿಗೆ ಸಾಲುತ್ತಿತ್ತು. ಮಾಧವಮಂತ್ರಿ ಅಣೆಕಟ್ಟೆಯಿಂದ ಪೂರ್ತಿನೀರು ಬಳಸುವಂತಿರಲಿಲ್ಲ. ಬೇಸಿಗೆ ಬೆಳೆಗೆ ತೊಂದರೆಯಾಗುತ್ತಿತ್ತು. ಹಾಗಾಗಿ ಧನಗೆರೆ ಅಣೆಕಟ್ಟೆಯ ನೀರನ್ನೂ ಬಳಸುವುದು ಅನಿವಾರ್ಯವಾಗಿತ್ತು. ಇದಕ್ಕಾಗಿ ಶಿವನಸಮುದ್ರ ಜಾಗೀರುದಾರನ ಒಪ್ಪಿಗೆ ಅವಶ್ಯವಿತ್ತು. ಆತ ತನ್ನ ವ್ಯಾಪ್ತಿಯಲ್ಲಿ ಬೇಸಿಗೆ ಬೆಳೆಯನ್ನು ರದ್ದುಗೊಳಿಸಬೇಕಿತ್ತು. ಹಾಗಾಗಿ ಮೈಸೂರು ಸಂಸ್ಥಾನ ಅವನೊಂದಿಗೆ ಒಪ್ಪಂದವೊಂದಕ್ಕೆ ಸಿದ್ಧವಾಯಿತು. ಇದಕ್ಕಾಗಿ ಅವನಿಗೆ ವಾರ್ಷಿಕವಾಗಿ 941 ರುಪಾಯಿಗಳ ಪರಿಹಾರ ಧನ ನೀಡಲು ಒಪ್ಪಲಾಯಿತು. ಇಷ್ಟೆಲ್ಲ ನಡೆದರೂ ಮೇಲ್ಭಾಗದ ಕಾಮಗಾರಿಗಳಿಗೆ ಮದ್ರಾಸಿನ ಒಪ್ಪಿಗೆ ಪಡೆಯಲೇಬೇಕಿತ್ತು. ಈ ಕುರಿತು ಮದ್ರಾಸ್ ಪ್ರಾವಿನ್ಸಿನೊಂದಿಗೆ 8-7-1899ರಿಂದ 24-8-1900ರವರೆಗೆ ಹಲವು ಸುತ್ತಿನ ಕಾಗದ ಪತ್ರಗಳ ವ್ಯವಹಾರ ನಡೆಯಿತು. ಅಂತಿಮವಾಗಿ ಜಾನ್ ಟೇಲರ್ ಪ್ರಭಾವದಿಂದ ಕರಡು ಒಪ್ಪಂದವೊಂದಕ್ಕೆ ಬರಲಾಯಿತು.

ಅದರ ಪ್ರಕಾರ,

1. ಶಿವನಸಮುದ್ರದಲ್ಲಿ ವಿದ್ಯುತ್ ಉತ್ಪಾದನೆಗೆ ಬಳಸಿದ ನೀರನ್ನು ಸಂಪೂರ್ಣವಾಗಿ ಮದ್ರಾಸ್ ಪ್ರಾಂತ್ಯಕ್ಕೆ ಹನಿಯೂ ಕೊರತೆಯಾಗದಂತೆ ಬಿಡಬೇಕು.
2. ಮೊದಲ ಐದು ವರ್ಷಗಳ ಕಾಲ, ಮೈಸೂರು ದರ್ಬಾರು ಕೇವಲ ತನ್ನ ಪಾಲಿನ ನೀರು ಬಳಸುವುದರಿಂದ ಮದ್ರಾಸು ಸರಕಾರಕ್ಕೆ ಯಾವುದೇ ಪರಿಹಾರ ನೀಡಬೇಕಿಲ್ಲ.
3. ಅಲ್ಲಿಂದ ಮುಂದೆ 30 ವರ್ಷಗಳ, ಕಾಲ ಒಟ್ಟು ಉತ್ಪಾದನೆಯ ಅರ್ಧದಷ್ಟು ವಿದ್ಯುತ್ತಿಗೆ ಪ್ರತಿ ಎಚ್‌ಪಿಗೆ ಐದು ರುಪಾಯಿಯಂತೆ ವಾರ್ಷಿಕ ಕನಿಷ್ಠ 2000 ರುಪಾಯಿಗಳ ಪರಿಹಾರ ಧನ ನೀಡಬೇಕೆಂಬ ನಿರ್ಣಯಕ್ಕೆ ಬರಲಾಯಿತು. ಈ ಒಪ್ಪಂದದ ನಂತರವಷ್ಟೇ ಮದ್ರಾಸು ಕಾವೇರಿ ಕಾಮಗಾರಿಗಳಿಗೆ ಅನುಮತಿ ನೀಡಿತು. ಇಲ್ಲಿ ಇನ್ನೊಂದು ವಿಶೇಷ ಗಮನಿಸಬೇಕು. ಏನೆಂದರೆ ಈ ಎಲ್ಲ ಪತ್ರ ವ್ಯವಹಾರಗಳೂ ಬ್ರಿಟಿಷ್ ರೆಸಿಡೆಂಟರ ಮೂಲಕವೇ ನಡೆದಿತ್ತು. ಇಷ್ಟಾಗಿಯೂ ಮದ್ರಾಸು ಇಷ್ಟೆಲ್ಲ ಅಡಚಣೆ ಒಡ್ಡಿತ್ತು. ಇಂತಹ ಪರಿಸ್ಥಿತಿಯಲ್ಲಿ ಮುಂದೆ ಸರ್ ಎಂ. ವಿಶ್ವೇಶ್ವರಯ್ಯನವರು ಕನ್ನಂಬಾಡಿಗೆ ಎಂತಹ ಹರಸಾಹಸ ಮಾಡಿ ಒಪ್ಪಿಗೆ ಪಡೆದಿರಬಹುದು ಊಹಿಸಿ.

ಆಧುನಿಕ ವೈದ್ಯಕೀಯದಲ್ಲಿ ಹಸ್ತಸಾಮುದ್ರಿಕ!

ಹಿಂದಿರುಗಿ ನೋಡಿದಾಗ

ಡಾ.ನಾ.ಸೋಮೇಶ್ವರ

vveditoped@gmail.com



ಮನುಷ್ಯನ ವಿಕಾಸದ ಜತೆಯಲ್ಲಿ ವಿಜ್ಞಾನ ಮತ್ತು ಹುಸಿ ವಿಜ್ಞಾನಗಳೆರಡೂ ಒಟ್ಟಿಗೆ ಬೆಳೆದುಬಂದವು. ಹಸ್ತಸಾಮುದ್ರಿಕವು ವಿಜ್ಞಾನವಲ್ಲ; ಅದು ಹುಸಿ ವಿಜ್ಞಾನಗಳಲ್ಲಿ ಒಂದು ಎಂದು ಆಧುನಿಕ ವಿಜ್ಞಾನದ ಅಭಿಮತ. ಹಾಗಿದ್ದಲ್ಲಿ ಹಸ್ತಸಾಮುದ್ರಿಕವು ಕ್ರಿ.ಪೂ.5000 ವರ್ಷಗಳಿಂದ ಇಂದಿನವರೆಗೆ ಉಳಿದು ಬರುವುದು ಅಸಾಧ್ಯವಾಗುತ್ತಿತ್ತು ಎನ್ನುವುದು ಗಮನೀಯ ವಿಚಾರ. ಹಸ್ತರೇಖೆಗಳ ಅಧ್ಯಯನವು ಸಂಪೂರ್ಣವಾಗಿ ಅನುಪಯುಕ್ತ ಹಾಗೂ ಅವೈಜ್ಞಾನಿಕ ಎನ್ನಲು ಸಾಧ್ಯವಿಲ್ಲ ಎನ್ನುವುದಕ್ಕೆ ಇಂದಿನ ದಿನಗಳಲ್ಲಿ ಕೆಲವು ಆಧಾರಗಳು ದೊರೆಯುತ್ತಿದೆ. ಹಸ್ತಸಾಮುದ್ರಿಕವು ಎಂದು ಆರಂಭವಾಯಿತು ಹಾಗೂ ಎಲ್ಲಿ ಆರಂಭವಾಯಿತು ಎನ್ನುವುದರ ಬಗ್ಗೆ ನಿಖರ ದಾಖಲೆಗಳಿಲ್ಲ. ಆದರೂ ಅದರ ಅಸ್ತಿತ್ವ ಇತಿಹಾಸ ಪೂರ್ವ ಕಾಲದಲ್ಲಿಯೇ ಇತ್ತು ಎನ್ನಲಾಗಿದೆ. ಹಸ್ತರೇಖೆಗಳು ವ್ಯಕ್ತಿ ವಿಶೇಷವಾದವು. ಹಾಗಾಗಿ ಅವುಗಳ ಬಗ್ಗೆ ಕುತೂಹಲವು ಬಹುಶಃ ಪ್ರಾಚೀನ ಭಾರತ ಅಥವ ಚೀನಾದಲ್ಲಿ ಆರಂಭವಾಗಿರಬಹುದು. ಅಲ್ಲಿಂದ ವಿಶ್ವದಾದ್ಯಂತ ವ್ಯಾಪಿಸಿ, ಚೀನಾ, ಟಿಬೆಟ್, ಪರ್ಷಿಯ, ಮೆಸಪೊಟೋಮಿಯ ಹಾಗೂ ಈಜಿಪ್ಟ್ ದೇಶಗಳಲ್ಲಿ ಹಸ್ತಸಾಮುದ್ರಿಕವು ಜನಪ್ರಿಯವಾಯಿತು. ಪ್ರಾಚೀನ ಗ್ರೀಸ್ ದೇಶದಲ್ಲಿ ಹಸ್ತಸಾಮುದ್ರಕವನ್ನು ಜಿಪ್ಸಿಗಳು ಕರಗತಗೊಳಿಸಿಕೊಂಡಿದ್ದರು. ಇವರ ಮೂಲ ಬಹುಶಃ ಭಾರತ. ಇವರ ರೊಮಾನಿ ಭಾಷೆಯಲ್ಲಿ ಸಾಕಷ್ಟು ಭಾರತೀಯ ಮೂಲದ ಶಬ್ದಗಳಿವೆ. ಇಂದು ಜಿಪ್ಸಿಗಳನ್ನು ಇಡೀ ಯೋರೋಪಿನಲ್ಲಿ, ಉತ್ತರ ಮತ್ತು ದಕ್ಷಿಣ ಅಮೆರಿಕದಲ್ಲಿ ನೋಡಬಹುದು. ಇವರು ಮೂಲತಃ ಅಲೆಮಾರಿಗಳು.

ಹಸ್ತಸಾಮುದ್ರಿಕ ಹಿನ್ನೆಲೆಯಲ್ಲಿ ಕೆಲವು ಪರಿಕಲ್ಪನೆಗಳಿವೆ. ಹಸ್ತರೇಖೆಗಳು ಒಬ್ಬ ವ್ಯಕ್ತಿಯ ಕೈಗನ್ನಡಿ ಇದ್ದ ಹಾಗೆ. ಭೌತಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಆಯಾಮಗಳು ಹಸ್ತದಲ್ಲಿ ಅಡಗಿವೆ. ಸೌರಮಂಡಲದ ಪ್ರಧಾನ ಗ್ರಹಗಳಿಗೆ ಹಸ್ತದಲ್ಲಿ ಸ್ಥಾನಗಳಿವೆ. ಅವುಗಳ ರಚನೆ ಹಾಗೂ ಅವುಗಳ ಮೇಲಿರುವ ವಿವಿಧ ರೇಖೆಗಳ ನಿಖರ ಅಧ್ಯಯನದಿಂದ, ಆ ವ್ಯಕ್ತಿಯ ವ್ಯಕ್ತಿತ್ವ ಹಾಗೂ ಭವಿಷ್ಯವನ್ನು ತಿಳಿಯಬಹುದು ಎನ್ನಲಾಗಿದೆ. ಇದೊಂದು ಪರಂಪರಾನುಗತವಾಗಿ ಬಂದಿರುವ ನಂಬಿಕೆ. ಹಸ್ತಸಾಮುದ್ರಿಕವು ರೇಖೆಗಳ ಸ್ವರೂಪ ಹಾಗೂ ಅವು ಸೂಚಿಸುವ ಫಲಿತಾಂಶಗಳಿಗೆ ಯಾವುದೇ ವೈಜ್ಞಾನಿಕ ಪುರಾವೆಯಿಲ್ಲ. ಜ್ಯೋತಿಷದ ಎರಡನೆಯ ಭಾಗವಾದ ಫಲ ಜ್ಯೋತಿಷದಂತೆ, ರೇಖೆಗಳ ಲಕ್ಷಣ ಮತ್ತು ಫಲಗಳ ಬಗ್ಗೆ, ಪ್ರಾಚೀನ ಗ್ರಂಥಗಳಲ್ಲಿ ಹೇಳಿರುವುದನ್ನು ನಂಬಬೇಕಾಗುತ್ತದೆ. ಅಷ್ಟೇ. ಅವನ್ನು ಆಧುನಿಕ ವಿಜ್ಞಾನದ ನಿಕಷಕ್ಕೆ ಒಡ್ಡುವುದು ಕಷ್ಟ. ಆದರೆ ಮಾನವ ಜನಾಂಗಕ್ಕೆ ಹಸ್ತಸಾಮುದ್ರಿಕದಿಂದ ಒಂದು ಉಪಯೋಗವಾಗಿದ್ದನ್ನು ಒಪ್ಪಬೇಕು. ಬ್ರಹ್ಮಾಂಡದಲ್ಲಿ ಮನುಷ್ಯನ ಸ್ಥಾನ, ಮನುಷ್ಯನ ಮೇಲೆ ಸೂರ್ಯ, ಚಂದ್ರ, ಗ್ರಹ, ನಕ್ಷತ್ರಗಳ ಪ್ರಭಾವ ಇತ್ಯಾದಿಗಳ ಬಗ್ಗೆ ಆಲೋಚಿಸಲು ಇಂಬನ್ನು ಕೊಟ್ಟಿತು. ಅತ್ಯಂತ ಕಚ್ಚಾ ಮನಃಶಾಸ್ತ್ರಕ್ಕೆ ಬುನಾದಿಯನ್ನು ಹಾಕಿದ್ದಲ್ಲದೆ, ಅಧ್ಯಾತ್ಮದ ಮೂಲ ಬೀಜಗಳು ಬಿತ್ತಲು ಅನುವು ಮಾಡಿಕೊಟ್ಟಿತು.

ಅಂಗೈ ಹಿಡಿತ

ಪ್ರಕೃತಿಯು ಮೂಲತಃ ನಮ್ಮ ಅಂಗೈಯಲ್ಲಿ ರೇಖೆಗಳನ್ನು ಏಕೆ ಸೃಜಿಸಿತು ಎನ್ನುವ ಪ್ರಶ್ನೆಯನ್ನು ಕೇಳಿದರೆ, ಅದಕ್ಕೆ ಆಧುನಿಕ ವಿಜ್ಞಾನವು ವಿವರಣೆಯನ್ನು ನೀಡುತ್ತದೆ. ನಮ್ಮ ಅಂಗೈ ಚರ್ಮವನ್ನು ಗಮನಿಸಿ. ಅದು ಮೃದುವಾಗಿದೆ ಹಾಗೂ ನಮ್ಯತೆಯನ್ನು ಉಳಿಸಿಕೊಂಡಿದೆ. ಒಂದು ವೇಳೆ ನಮ್ಮ ಅಂಗೈಯಲ್ಲಿ ರೇಖೆಗಳೇ ಇರದಿದ್ದಲ್ಲಿ, ಇಡೀ ಅಂಗೈ ಮೃದುವಾಗಿರುತ್ತಿತ್ತು. ಮುಷ್ಟಿಯನ್ನು ಕಟ್ಟಿ ಯಾವುದೇ ವಸ್ತುವನ್ನು ಬಿಗಿಯಾಗಿ ಹಿಡಿದುಕೊಳ್ಳುವುದು ಕಷ್ಟವಾಗುತ್ತಿತ್ತು. ಹಾಗಾಗಿ ನಾವು ನಮ್ಮ ಅಂಗೈಯನ್ನು ಮಡಚಿದಾಗ ಎಲ್ಲೆಲ್ಲಿ ಮಡಿಕೆಗಳು ಮೂಡುತ್ತವೆಯೋ, ಅಲ್ಲಲ್ಲಿರುವ ಚರ್ಮವು ಕೆಳಗಿರುವ ಸ್ನಾಯುಗಳಿಗೆ ಅಥವ ಮೂಳೆಗಳಿಗೆ ಬಿಗಿಯಾಗಿ ಅಂಟಿಕೊಂಡವು. ಅಂಗೈಯಲ್ಲಿ ಪ್ರಧಾನವಾಗಿ ನಾಲ್ಕು ರೇಖೆಗಳು ಚರ್ಮವನ್ನು ಸ್ನಾಯುಗಳಿಗೆ ಬಿಗಿದಿದ್ದರೆ, ಬೆರಳುಗಳಲ್ಲಿರುವ ಗೆರೆಗಳು ಚರ್ಮವನ್ನು ಬೆರಳ ಕೀಲುಗಳಿಗೆ ಬಿಗಿದಿವೆ. ಹಾಗಾಗಿ ಬೆರಳುಗಳನ್ನು ಸರಾಗವಾಗಿ ಚಲಿಸಿ, ಸೂಕ್ಷ್ಮತರವಾದ ನಾನಾ ಕುಸುರಿ ಕೆಲಸಗಳನ್ನು ಮಾಡಲು ಸಾಧ್ಯವಾಗಿದೆ. ಅಂಗೈ ತನ್ನ ಮೃದುತ್ವ ಹಾಗೂ ನಮ್ಯತೆಯನ್ನು ಉಳಿಸಿಕೊಳ್ಳುವುದರ ಜತೆಯಲ್ಲಿ ದೃಢತೆಯನ್ನೂ ಕೊಟ್ಟಿವೆ. ಹಾಗಾಗಿ ಮನುಷ್ಯನ ಎಲ್ಲ ಸಾಧನೆಗಳ ಹಿಂದೆ ನಮ್ಮ ಅಂಗೈ ರೇಖೆಗಳ ಗಣನೀಯ ಪಾಲಿದೆ. ಈ ರೇಖೆಗಳು ಅಂಗೈ ಮತ್ತು ಬೆರಳುಗಳನ್ನು ಮಡಚುವ ಕಡೆ ಸ್ಥಿರವಾಗಿರುವ ಕಾರಣ ಇವುಗಳಿಗೆ ಅಂಗೈ ಮಡಚು ರೇಖೆಗಳು (ಪಾಮಾರ್ ಫ್ಲೆಕ್ಷನ್ ಕ್ರೀಸಸ್) ಎಂಬ ಹೆಸರು ಬಂದಿದೆ. ನಮ್ಮ ಸನಿಹ ಸಂಬಂಧಿಗಳಾದ ಮಂಗಗಳು ಮತ್ತು ಚಿಂಪಾಂಜ಼ಿಗಳ ಅಂಗೈಯಲ್ಲೂ ಕೆಲವು ರೇಖೆಗಳು ಇರುವುದುಂಟು. ಏಕೆಂದರೆ ಅವು ರೆಂಬೆ ಕೊಂಬೆಗಳನ್ನು ಹಿಡಿದು ಮರದಿಂದ ಮರಕ್ಕೆ ಜಿಗಿಯಬೇಕಾದರೆ, ಅವುಗಳ ಅಂಗೈ ಹಿಡಿತವೂ ಬಿಗಿಯಾಗಿರಬೇಕಾಗುತ್ತದೆ. ಆದರೆ ಮನುಷ್ಯರ ಅಂಗೈಯಲ್ಲಿ ಕಾಣುವಷ್ಟು ಸಂಕೀರ್ಣವಾದ ರೇಖೆಗಳು ಅವುಗಳ ಅಂಗೈಯಲ್ಲಿ ಇಲ್ಲ. ಏಕೆಂದರೆ ಅವು ಮರವನ್ನು ಹತ್ತುವುದನ್ನು, ಕೊಂಬೆ ಕೊಂಬೆಯಿಂದ ಕೊಂಬೆಗೆ ಜಿಗಿಯುವುದನ್ನು ಬಿಟ್ಟು ಕಂಪ್ಯೂಟರಿನಲ್ಲಿ ಟೈಪ್ ಮಾಡುವಂತಹ ಸೂಕ್ಷ್ಮ ಕೆಲಸಗಳನ್ನು ಮಾಡಬೇಕಾಗಿಲ್ಲವಲ್ಲ!

ಗರ್ಭಜನಿತ

ಅಂಗೈ ರೇಖೆಗಳು ತಾಯಿಯ ಗರ್ಭದಲ್ಲಿಯೇ ಮೂಡುತ್ತವೆ. ಪಿಂಡಗೂಸಿಗೆ 12 ವಾರಗಳಾಗುವ ಹೊತ್ತಿಗೆ, ಅದರ ಅಂಗೈಯಲ್ಲಿರುವ ಎಲ್ಲ ರೇಖೆಗಳು ಮೂಡುತ್ತವೆ. ಹಾಗಾಗಿ ಗರ್ಭದಲ್ಲಿರುವ ಪಿಂಡಗೂಸು ಮುಷ್ಟಿ ಕಟ್ಟುವುದನ್ನು ಸ್ಕ್ಯಾನ್ ಮೂಲಕ ನಾವು ನೋಡಬಹುದಾಗಿದೆ. ಆಧುನಿಕ ವೈದ್ಯಕೀಯದಲ್ಲಿ ಅಂಗೈರೇಖೆಗಳ (ಅಂಗೈ, ಅಂಗಾಲು ಮತ್ತು ಬೆರಳುಗಳ ಮೇಲಿರುವ ರೇಖೆಗಳು) ಅಧ್ಯಯನಕ್ಕೆ ಚರ್ಮರೇಖಾಧ್ಯಯನ (ಡರ್ಮೋಗ್ಲೈಫಿಕ್ಸ್) ಎಂಬ ಹೆಸರಿದೆ. ಮಾನವಶಾಸ್ತ್ರ (ಆಂಥ್ರೋಪಾಲಜಿ), ಅಪರಾಧ ಶಾಸ್ತ್ರ (ಕ್ರಿಮಿನಾಲಜಿ) ಹಾಗೂ ವೈದ್ಯಕೀಯದಲ್ಲಿ ಈ ಅಧ್ಯಯನವು ಹೆಚ್ಚು ಉಪಯುಕ್ತ. 1892ರಲ್ಲಿ ಫ್ರಾನ್ಸಿಸ್ ಗಾಲ್ಟನ್ (ಚಾರ್ಲ್ಸ್ ಡಾರ್ವಿನ್ ಸಂಬಂಧಿ) ವ್ಯಕ್ತಿಯ ಅಂಗೈ ಮತ್ತು ಬೆರಳಚ್ಚುಗಳು ಆಯಾ ವ್ಯಕ್ತಿಗೆ ವಿಶೇಷವಾಗಿರುತ್ತವೆ ಎಂಬ ಅಂಶವನ್ನು ಪುರಾವೆ ಸಹಿತ ವಿವರಿಸಿದ. ಅಂದಿನಿಂದ ಇಂದಿನವರೆಗೆ ಅಪರಾಧ ಶಾಸ್ತ್ರದಲ್ಲಿ ಕೈಬೆರಳಚ್ಚುಗಳ ಅಧ್ಯಯನವು ಪ್ರಧಾನ ಪಾತ್ರವನ್ನು ವಹಿಸುತ್ತಿದೆ. ವೈದ್ಯಕೀಯದಲ್ಲಿ ಈ ರೇಖೆಗಳ ಅಧ್ಯಯನದ ಮಹತ್ವವನ್ನು ತಿಳಿಯಬೇಕಾದರೆ, ರೇಖೆಗಳ ಹೆಸರುಗಳ ಪರಿಚಯವಿರಬೇಕಾಗುತ್ತದೆ. ಅದಕ್ಕಾಗಿ ಹಸ್ತಸಾಮುದ್ರಿಕದ ಪರಿಭಾಷೆಯನ್ನೇ ಬಳಸಬಹುದು. ನಮ್ಮ ಅಂಗೈಯಲ್ಲಿ ಪ್ರಧಾನವಾಗಿ ನಾಲ್ಕು ರೇಖೆಗಳಿವೆ. ಎರಡು ರೇಖೆಗಳು ಕಿರುಬೆರಳ ಬುಡದಿಂದ ಅಂಗೈಯಾದ್ಯಂತ ಸಾಗಿ, ತೋರು ಬೆರಳು ಮತ್ತು ಹೆಬ್ಬೆರಳ ನಡುವೆ ಕೊನೆಗೊಳ್ಳುತ್ತವೆ. ಮೇಲುಗಡೆಯ ರೇಖೆಯನ್ನು ಹೃದಯರೇಖೆ (ಹಾರ್ಟ್ ಲೈನ್) ಹಾಗೂ ಕೆಳಗಿನ ರೇಖೆಯನ್ನು ಶಿರೋರೇಖೆ (ಹೆಡ್ ಲೈನ್) ಎಂದು ಕರೆಯುವುದುಂಟು. ಹೆಬ್ಬೆರಳ ಬುಡವನ್ನು ಬಳಸಿಕೊಂಡು ಸಾಗುವ ರೇಖೆಯೇ ಜೀವನರೇಖೆ (ಲೈಫ್ ಲೈನ್). ಮಣಿಕಟ್ಟಿನಿಂದ ಹಿಡಿದು ಸರಿಸುಮಾರು ನಡುಬೆರಳ ಬುಡದವರೆಗೆ ಸಾಗುವ ರೇಖೆಯೇ ವಿಧಿ ರೇಖೆ (ಫೇಟ್ ಲೈನ್). ಇವಲ್ಲದೇ ಇನ್ನೂ ಅನೇಕ ಚಿಕ್ಕಪುಟ್ಟ ರೇಖೆಗಳುಂಟು. ಆಧುನಿಕ ವೈದ್ಯಕೀಯವು ಅಂಗೈರೇಖೆಗಳು ಕೆಲವು ಅನಾರೋಗ್ಯಗಳ ಸೂಚಕ ಎನ್ನುವುದಕ್ಕೆ ಪುರಾವೆಯನ್ನು ಒದಗಿಸುತ್ತದೆ. ಹಾಗಾಗಿ ವೈದ್ಯರು ರೋಗಿಯ ಕೈಗಳನ್ನು, ವಿಶೇಷವಾಗಿ ಉಗುರುಗಳನ್ನು ಗಮನಿಸಿ, ಆತನ ಸಮಗ್ರ ಆರೋಗ್ಯದ ಬಗ್ಗೆ ಒಂದು ಪಕ್ಷಿನೋಟವನ್ನು ಪಡೆಯುವುದುಂಟು. ರಕ್ತಹೀನತೆ, ಕ್ಯಾಲ್ಷಿಯಂ ಕೊರತೆ, ಶಿಲೀಂಧ್ರರೋಗಗಳ ಉಪಸ್ಥಿತಿ ಇತ್ಯಾದಿಗಳನ್ನು ತಿಳಿಯಬಹುದು. ಹಾಗೆಯೇ ಅಂಗೈಯನ್ನು ಗಮನಿಸಿದಾಗ, ಅಲ್ಲಿರುವ ಪ್ರಧಾನ ರೇಖೆಗಳ ರಚನೆ ಮತ್ತು ಸ್ಥಾನಗಳು ಕೆಲವು ಆನುವಂಶಿಕ ರೋಗಗಳನ್ನು ಸೂಚಿಸುವುದುಂಟು. ಅಂಗೈಯಲ್ಲಿ ಹೃದಯ ಮತ್ತು ಶಿರೋರೇಖೆಗಳ ಬದಲು ಒಂದೇ ಒಂದು ರೇಖೆಯು ಕಂಡಬರಬಹುದು. ಇದುವೇ ವಾನರರೇಖೆ (ಸಿಮಿಯನ್ ಲೈನ್). ವಾನರರೇಖೆಯು ಡೌನ್ ಲಕ್ಷಣಾವಳಿ (ಡೌನ್ ಸಿಂಡ್ರೋಮ್) ಯನ್ನು ಸೂಚಿಸಬಲ್ಲುದು ಅಥವಾ ಭ್ರೂಣ ಆಲ್ಕೋಹಾಲ್ ಲಕ್ಷಣಾವಳಿಯನ್ನು (ಫೀಟಲ್ ಆಲ್ಕೋಹಾಲ್ ಸಿಂಡ್ರೋಮ್) ಸೂಚಿಸಬಹುದು. ಡೌನ್ ಲಕ್ಷಣಾವಳಿಯನ್ನು ಹೊಂದಿರುವ ಮಗುವಿಗೆ ಬುದ್ಧಿಮಾಂದ್ಯತೆಯಿರುತ್ತದೆ. ಜನ್ಮದತ್ತ ಹೃದಯ ವೈಪರೀತ್ಯಗಳಿರುತ್ತದೆ. ತುಂಬಾ ಮುದ್ದಾಗಿ ವರ್ತಿಸುವ ಹಾಗೂ ಸಂಗೀತವನ್ನು ಅಪಾರವಾಗಿ ಪ್ರೀತಿಸುವ ಈ ಮಗುವು ಹೆಚ್ಚು ವರ್ಷಗಳ ಕಾಲ ಬದುಕಲಾರದು. ಇನ್ನು ಭ್ರೂಣ ಆಲ್ಕೋಹಾಲ್ ಲಕ್ಷಣಾವಳಿ. ಹೆಸರೇ ಸೂಚಿಸುವ ಹಾಗೆ ಇದು ತಾಯಿಯು ಗರ್ಭವತಿಯಾಗಿದ್ದಾಗ ಮದ್ಯಪಾನವನ್ನು ಮಾಡಿದುದರ ಫಲ. ಇಂತಹ ಮಕ್ಕಳ ಮಿದುಳು ಪೂರ್ಣ ಬೆಳೆದಿರುವುದಿಲ್ಲ. ಕೈ, ಕಾಲು, ಬೆರಳು, ಕೀಲುಗಳು ಅಸಹಜವಾಗಿರಬಹುದು. ಕಣ್ಣು ಸರಿಯಾಗಿ ಕಾಣಿಸದು. ಕಿವಿಯು ಸರಿಯಾಗಿ ಕೇಳಿಸದು. ಜನ್ಮದತ್ತ ಹೃದಯ ಮತ್ತು ಮೂತ್ರಪಿಂಡಗಳ ವೈಪರೀತ್ಯಗಳಿರಬಹುದು. ಸಹಜ ಬೆಳವಣಿಗೆ ಅಸಾಧ್ಯ. ಈ ಎರಡೂ ಲಕ್ಷಣಾವಳಿಯಿರುವ 100 ಮಕ್ಕಳ ಅಂಗೈಯನ್ನು ಗಮನಿಸಿದರೆ, ಅವುಗಳಲ್ಲಿ ಶೇ.50 ಮಕ್ಕಳಲ್ಲಿ ವಾನರರೇಖೆ ಇರುವುದನ್ನು ಗಮನಿಸಬಹುದು. ವೈದ್ಯರು ಕೇವಲ ವಾನರರೇಖೆಯನ್ನು ನೋಡಿ ರೋಗ ನಿಧಾನವನ್ನು ಮಾಡುವುದಿಲ್ಲ. ಸೂಕ್ತ ಕ್ರೋಮೋಸೋಮ್ ಅಧ್ಯಯನವನ್ನು ಕೈಗೊಂಡ ನಂತರವೇ ನಿಖರ ನಿದಾನವನ್ನು ಮಾಡುವುದು. ಕೆಲವರಲ್ಲಿ ಹೃದಯ ಮತ್ತು ಶಿರೋರೇಖೆಗಳು, ಸಮಾನಾಂತರವಾಗಿ ತೋರುಬೆರಳ ಬುಡದಿಂದ ಕಿರುಬೆರಳ ಬುಡದತ್ತ ಸಾಗುತ್ತವೆ. ಇವಕ್ಕೆ ಸಿಡ್ನಿರೇಖೆಗಳೆಂದು ಹೆಸರು. ಸಿಡ್ನಿ ರೇಖೆಗಳಿರುವ ಶೇ.50 ಮಕ್ಕಳಲ್ಲಿ ರಕ್ತಕ್ಯಾನ್ಸರ್ ಅಥವ ಕ್ಯಾನ್ಸರ್ ಗಂಥಿಗಳು ಬೆಳೆಯಬಹುದು. ಹೀಗೆ ಹಲವು ಆನುವಂಶಿಕ ರೋಗಗಳ ಅಸ್ತಿತ್ವವನ್ನು ಹಾಗೂ ಕ್ಯಾನ್ಸರ್ ಬರಬಹುದಾದ ಸಾಧ್ಯತೆಗಳನ್ನು ಊಹಿಸಿ, ಸೂಕ್ತ ತಪಾಸಣೆಗಳಿಂದ ಅವನ್ನು ಖಚಿತ ಪಡಿಸಿಕೊಂಡು ಚಿಕಿತ್ಸಾ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಆಧುನಿಕ ವೈದ್ಯಕೀಯದಲ್ಲಿ ಹಾಗೂ ಅಪರಾಧ ಶಾಸ್ತ್ರದಲ್ಲಿ ಅಂಗೈರೇಖೆಗಳ ಅಧ್ಯಯನವು ಉಪಯುಕ್ತವಾಗಿರುವ ಕಾರಣ, ಹಸ್ತಸಾಮುದ್ರಿಕದ ಬಗ್ಗೆ ನಾವು ತಿಳಿಯಬೇಕಾದದ್ದು ಇನ್ನೂ ಇದೆ ಎನ್ನಲೂಬಹುದು.